# ಇನ್ನು ವರ್ಚುವಲ್ ಎಟಿಎಂ ಕಾಲ!




**ಸುತ್ತಮುತ್ತಲಿನ ಅಂಗಡಿಗಳೇ ಎಟಿಎಂ ಆಗಿ ಪರಿವರ್ತನೆಗೊಳ್ಳುವ ಕಾಲ ಹತ್ತಿರದಲ್ಲಿದೆ. ಈ ರೂಪಾಂತರ ದೇಶದ ಕೆಲವು ಭಾಗಗಳಲ್ಲಿ ಈಗಾಗಲೇ ಸಾಕಾರಗೊಂಡಿದೆ.**

**■ ಶಶಿಕುಮಾರ್ ಸಿ.**

ಬ್ಯಾಂಕ್ ಖಾತೆಯಲ್ಲಿನ ಹಣ ಹಿಂಪಡೆಯಲು ಎಟಿಎಂ ಕೇಂದ್ರಗಳ ಮೇಲೆ ಜನ ಹೆಚ್ಚಾಗಿ ಅವಲಂಬಿತರಾಗಿದ್ದಾರೆ. ಎಟಿಎಂನಲ್ಲಿ ಸಕಾಲಕ್ಕೆ ಹಣ ಸಿಗದಿದ್ದಾಗ, ತಾಂತ್ರಿಕ ಸಮಸ್ಯೆಗಳು ಎದುರಾದಾಗ ಅಥವಾ ಎಟಿಎಂ ಕೇಂದ್ರಗಳು ತುಂಬಾ ದೂರವಿದ್ದಾಗ ಹಣಕ್ಕಾಗಿ ಜನರ ಪರದಾಟ ಹೇಳತೀರದು. ಅಂತಹ ಸಂದರ್ಭದಲ್ಲಿ ಡಿಜಿಟಲ್ ಪಾವತಿಯಂತೆಯೇ ಎಟಿಎಂಗಳು ಡಿಜಿಟಲೀಕರಣಗೊಳ್ಳಬಾರದೆ?

ಈ ಕಲ್ಪನೆ ಈಗ ಸಾಕಾರಗೊಂಡಿದೆ. 'ಫಿನ್‌ಟೆಕ್' ಕಂಪನಿಯು 'ಪೇಮಾರ್ಟ್ ಇಂಡಿಯಾ' ಎಂಬ ಹೊಸ ಸವಲತ್ತನ್ನು ಈಚೆಗೆ ದೇಶದ ಕೆಲವು ಭಾಗಗಳಲ್ಲಿ ಪ್ರಾಯೋಗಿಕವಾಗಿ ಕಾರ್ಯರೂಪಕ್ಕೆ ತಂದಿದೆ. ಈ ಯೋಜನೆಯನ್ನು ಕಂಪನಿ 'ವರ್ಚುವಲ್ ಎಟಿಎಂ' ಎಂದು ಕರೆದಿದೆ.

ಭೌತಿಕ ಎಟಿಎಂಗೆ ತದ್ವಿರುದ್ಧವಾದ ವರ್ಚುವಲ್ ಎಟಿಎಂಗೆ, ಕಾರ್ಡ್ ಹಾಗೂ ಪಿನ್ ಅಗತ್ಯವಿಲ್ಲ. ಅದಕ್ಕಿಂತ ಮಿಗಿಲಾಗಿ, ಜನಸಂಖ್ಯೆಗೆ ಅನುಗುಣವಾಗಿ ಅಲ್ಲಲ್ಲಿ ಸ್ಥಾಪಿಸಿದ ಎಟಿಎಂ ಕೇಂದ್ರಗಳಿಗೆ ಅಲೆದಾಡುವ ಅಗತ್ಯವಿಲ್ಲ. ನೀವಿರುವ ಜಾಗದ ಯಾವುದಾದರೂ ಒಂದು ಅಂಗಡಿಗೆ ಹೋದರೆ ಸಾಕು. ಅಲ್ಲಿ ನಿಮಗೆ ಎಟಿಎಂನಲ್ಲಿ ಸಿಗುವಂತೆಯೇ ಹಣ ಸಿಗುತ್ತದೆ.

## ಉಚಿತ ಸೇವೆ

ಎಟಿಎಂ ಕೇಂದ್ರಗಳಲ್ಲಿ ಇಂತಿಷ್ಟು ಬಾರಿ ಹಣ ವರ್ಗಾವಣೆಗೆ ಉಚಿತ ಸೇವೆಯಿದ್ದು, ಅದು ಮೀರಿ ಹಣ ಹಿಂಪಡೆದರೆ ಶುಲ್ಕ ವಿಧಿಸಲಾಗುತ್ತದೆ. ಆದರೆ ವರ್ಚುವಲ್ ಎಟಿಎಂನಲ್ಲಿ ತಿಂಗಳ ಗರಿಷ್ಠ ಮಿತಿವರೆಗೆ ಎಷ್ಟೇ ಬಾರಿ ಹಣ ಹಿಂಪಡೆದರೂ ಯಾವುದೇ ಶುಲ್ಕ ವಿಧಿಸಲಾಗುವುದಿಲ್ಲ. ಇದು ಸಂಪೂರ್ಣವಾಗಿ ಉಚಿತವಾಗಿರಲಿದೆ.

## ಯಾವ ಬ್ಯಾಂಕ್‌ನಲ್ಲಿ ಈ ಸೇವೆ?

ಐಡಿಬಿಐ ಬ್ಯಾಂಕ್‌ನೊಂದಿಗೆ ಒಪ್ಪಂದ ಮಾಡಿಕೊಂಡಿರುವ ಕಂಪನಿಯು ಕಳೆದ ಆರು ತಿಂಗಳಿನಿಂದ ಈ ಯೋಜನೆಯನ್ನು ಪ್ರಾಯೋಗಿಕ ಪರೀಕ್ಷೆಗೆ ಒಳಪಡಿಸಿತ್ತು. ಪರೀಕ್ಷೆಯು ಯಶಸ್ವಿಯಾಗಿದ್ದು, ಪ್ರಸ್ತುತ ಇಂಡಿಯನ್ ಬ್ಯಾಂಕ್, ಜಮ್ಮು ಆ್ಯಂಡ್ ಕಾಶ್ಮೀರ್ ಬ್ಯಾಂಕ್ ಮತ್ತು ಕರೂರ್ ವೈಶ್ಯ ಬ್ಯಾಂಕ್‌ಗಳೊಂದಿಗೆ ಕಂಪನಿಯು ಒಡಂಬಡಿಕೆ ಮಾಡಿಕೊಂಡಿದೆ.

'ದೇಶದಾದ್ಯಂತ ತನ್ನ ಪಾಲುದಾರಿಕೆಯ ಬ್ಯಾಂಕ್‌ಗಳ ಸಹಭಾಗಿತ್ವದಲ್ಲಿ ವರ್ಚುವಲ್ ಎಟಿಎಂ ಸೇವೆಯನ್ನು ಮಾರ್ಚ್‌ನಲ್ಲಿ ಜಾರಿಗೊಳಿಸಲಾಗುತ್ತದೆ. ಏಪ್ರಿಲ್ ಅಥವಾ ಮೇ ತಿಂಗಳ ಅಂತ್ಯದೊಳಗೆ ನಾವು ನಮ್ಮ ಗುರಿ ತಲುಪಲಿದ್ದೇವೆ' ಎಂದಿದ್ದಾರೆ ಕಂಪನಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಮಿತ್ ನಾರಂಗ್.

'ಸೇವೆ ವಿಸ್ತರಿಸುವ ಸಲುವಾಗಿ ಎಲ್ಲ ಪ್ರಮುಖ ಬ್ಯಾಂಕ್‌ಗಳೊಂದಿಗೆ ಮಾತುಕತೆ ನಡೆಸಲಾಗುತ್ತಿದೆ' ಎಂದಿರುವ ಅವರು, 'ಸದ್ಯ ಚಂಡೀಗಢ, ದೆಹಲಿ, ಹೈದರಾಬಾದ್, ಚೆನ್ನೈ ಹಾಗೂ ಮುಂಬೈನಲ್ಲಿ ಮಾತ್ರ ಈ ಸೇವೆ ಕಲ್ಪಿಸಲಾಗಿದೆ' ಎಂದು ಮಾಹಿತಿ ಹಂಚಿಕೊಂಡಿದ್ದಾರೆ. ದೇಶದಾದ್ಯಂತ 5 ಲಕ್ಷ ಸ್ಥಳಗಳಲ್ಲಿ ಈ ಸೇವೆ ಕಲ್ಪಿಸುವ ಪ್ರಾರಂಭಿಕ ಉದ್ದೇಶ ಹೊಂದಿರುವ ಕಂಪನಿಯು, ಈ ನಿಟ್ಟಿನಲ್ಲಿ ವರ್ಚುವಲ್ ಎಟಿಎಂ ಸ್ಥಾಪಿಸಲು ಈಗಾಗಲೇ ಸಿಎಸ್‌ಸಿ ಇ–ಗವರ್ನೆನ್ಸ್ ಸರ್ವೀಸಸ್ ಇಂಡಿಯಾ ಲಿಮಿಟೆಡ್‌ನೊಂದಿಗೆ ಒಪ್ಪಂದಕ್ಕೆ ಮುಂದಾಗಿದೆ.

## ಹಣ ಪಡೆಯುವ ವಿಧಾನ

ಹಣ ಹಿಂಪಡೆಯಲು ಸ್ಮಾರ್ಟ್‌ಫೋನ್, ಇಂಟರ್‌ನೆಟ್ ಹಾಗೂ ಮೊಬೈಲ್ ಬ್ಯಾಂಕಿಂಗ್ ಆ್ಯಪ್ ಇದ್ದರೆ ಸಾಕು. ಅದಕ್ಕಿಂತ ಮೊದಲು ಬ್ಯಾಂಕ್‌ನೊಂದಿಗೆ ನಿಮ್ಮ ಆಧಾರ್ ಕಾರ್ಡ್ ಹಾಗೂ ಮೊಬೈಲ್ ಸಂಖ್ಯೆಯು ಜೋಡಣೆಯಾಗಿರಬೇಕು.

ಆ್ಯಪ್ ತೆರೆದು ಹಣಕ್ಕಾಗಿ ಬೇಡಿಕೆ ಸಲ್ಲಿಸಬೇಕು. ನಂತರ ಬ್ಯಾಂಕ್ ವತಿಯಿಂದ ಒಟಿಪಿ ಜನರೇಟ್ ಮಾಡಿ ನಿಮ್ಮ ನೋಂದಾಯಿತ ಮೊಬೈಲ್ ಸಂಖ್ಯೆಗೆ ಕಳುಹಿಸಲಾಗುತ್ತದೆ. ಆ ಒಟಿಪಿಯನ್ನು ಪೇಮಾರ್ಟ್ (ವರ್ಚುವಲ್ ಎಟಿಎಂ) ಜೊತೆಗೆ ಒಪ್ಪಂದ ಮಾಡಿಕೊಂಡ ಅಂಗಡಿ ಮಾಲೀಕರಿಗೆ ತೋರಿಸಿದರೆ ಸಾಕು. ಒಟಿಪಿಯನ್ನು ಪೇಮಾರ್ಟ್ ಆ್ಯಪ್‌ನಲ್ಲಿ ನಮೂದಿಸಿ ಕೈವೈಸಿ ಮಾಡಿದ ಬಳಿಕ ಹಣ ನೀಡುತ್ತಾರೆ. ಬಳಿಕ ಅಂಗಡಿ ಮಾಲೀಕರಿಗೆ ಪೇಮಾರ್ಟ್ ವೇದಿಕೆ ಮೂಲಕ ಬ್ಯಾಂಕ್ ಗ್ರಾಹಕರ ಖಾತೆಯಿಂದ ಹಣ ಸಂದಾಯವಾಗುತ್ತದೆ.

## ಎಷ್ಟು ಹಣ ಪಡೆಯಬಹುದು?

ವರ್ಚುವಲ್ ಎಟಿಎಂನಲ್ಲಿ ಗ್ರಾಹಕರು ಕನಿಷ್ಠ ನೂರು ರೂಪಾಯಿಯಿಂದ ಗರಿಷ್ಠ ಎರಡು ಸಾವಿರ ರೂಪಾಯಿವರೆಗೆ ಒಮ್ಮೆಗೆ ಹಣ ಪಡೆಯಬಹುದು. ಒಟ್ಟಾರೆ ಒಂದು ತಿಂಗಳಿಗೆ ಹತ್ತು ಸಾವಿರ ರೂಪಾಯಿ ಹಣ ಪಡೆಯುವ ಗರಿಷ್ಠ ಮಿತಿಯನ್ನು ವಿಧಿಸಲಾಗಿದೆ.

ಸಣ್ಣ ಪುಟ್ಟ ಖರ್ಚಿಗೆ ನಗದು ಅಗತ್ಯ ಇರುತ್ತದೆ. ನಗದು ಅಗತ್ಯವುಳ್ಳ ಜನರಿಗೆ ಈ ವರ್ಚುವಲ್ ಎಟಿಎಂ ಸಹಾಯಕ. ಅಂಗಡಿ ಮಾಲೀಕರು ದೊಡ್ಡ ಪ್ರಮಾಣದ ಹಣವನ್ನು ತಮ್ಮ ಬಳಿ ಇಟ್ಟುಕೊಂಡಿರುವುದಿಲ್ಲ. ಹೀಗಾಗಿ, ದೊಡ್ಡ ಪ್ರಮಾಣದ ಹಣ ಹಿಂಪಡೆಯುವವರಿಗೆ ಇದು ಉತ್ತಮ ವೇದಿಕೆಯಲ್ಲ. ಆರ್ಥಿಕ ಶಿಸ್ತು ಪಾಲನೆ ದೃಷ್ಟಿಯಿಂದಲೂ ಹತ್ತು ಸಾವಿರ ರೂಪಾಯಿಗೆ ಮಿತಿ ಹೇರಲಾಗಿದೆ ಎಂಬುದು ಕಂಪನಿ ಅಭಿಪ್ರಾಯ.

## ಬ್ಯಾಂಕ್‌ಸ್ನೇಹಿ

ವರ್ಚುವಲ್ ಎಟಿಎಂ ಜನಸಾಮಾನ್ಯರಿಗಷ್ಟೇ ಅಲ್ಲದೆ ಬ್ಯಾಂಕ್‌ಗಳಿಗೂ ಅನುಕೂಲಕರವಾಗಲಿದೆ ಎಂಬುದು ಪೇಮಾರ್ಟ್ ಅಭಿಪ್ರಾಯ. ಬ್ಯಾಂಕ್‌ಗಳು ಎಟಿಎಂ ಕೇಂದ್ರ ಸ್ಥಾಪಿಸಲು ಸಾಧ್ಯವಾಗದ ಜಾಗಗಳಲ್ಲಿ ಸುಲಭವಾಗಿ ಬ್ಯಾಂಕ್ ಸೇವೆಯನ್ನು ನಮ್ಮ ಮೂಲಕ ವಿಸ್ತರಿಸಬಹುದು. ಭೌತಿಕ ಎಟಿಎಂ ಕೇಂದ್ರಗಳನ್ನು ಸ್ಥಾಪಿಸಲು ತಗಲುವ ಒಟ್ಟಾರೆ ವೆಚ್ಚಕ್ಕೆ ಸಂಪೂರ್ಣವಾಗಿ ಕಡಿವಾಣ ಹಾಕಬಹುದು ಎಂಬುದು ಕಂಪನಿ ಮಾತು.

ಪೇಮಾರ್ಟ್‌ನಿಂದಾಗಿ ಅಂಗಡಿ ಮಾಲೀಕರಿಗೂ ಹೊಸ ಆದಾಯದ ಮೂಲ ಸಿಕ್ಕಂತಾಗುತ್ತದೆ. ಹಣ ವರ್ಗಾವಣೆ ಆಧಾರದ ಮೇಲೆ ಅವರಿಗೆ ಕಮಿಷನ್ ಒದಗಿಸಲಾಗುತ್ತದೆ. ಕಮಿಷನ್ ಆದಾಯ ಹೆಚ್ಚಿದಂತೆಲ್ಲಾ ಹಣ ವರ್ಗಾವಣೆಯಲ್ಲಿ ಹೆಚ್ಚು ಹೆಚ್ಚಾಗಿ ತೊಡಗಿಕೊಳ್ಳುವಂತೆ ಜನರನ್ನು ಪ್ರೇರೇಪಿಸುತ್ತಾರೆ. ಇದು ಪರೋಕ್ಷವಾಗಿ ಬ್ಯಾಂಕ್‌ಗಳಿಗೂ ನೆರವಾಗಲಿದೆ. ■